## ***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು***

**ಎಸ್‌ಸಿ. 245/2023**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಅಮರ್ | | ***ಪ್ರಮಾಣ ಮಾಡಿಸಿದ ದಿನಾಂಕಃ*** |
| **ತಂದೆ/ಗಂಡನ ಹೆಸರು** | ಃ ಶ್ರೀ ಮಂಚೇಗೌಡ | | **23.01.2025** |
| **ವಯಸ್ಸು** | ಃ **26** ವರ್ಷ | | |
| **ವೃತ್ತಿ** | ಃ ಡ್ರೈವರ್ | **ಪ್ರಾ.ಸಾ.** | ಃ **11** |
| **ವಾಸಸ್ಥಳ** | ಃ ಕುಂಬಾರಕೊಪ್ಪಲು | **ಚಾ.ಸಾ.** | ಃ **06** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ದಿಃ*14.03.2024* ರಂದು ರಾತ್ರಿ *8.30-9* ಸಮಯದಲ್ಲಿ ಚಾ.ಸಾ-*1* ಚಂದನ್ ಇವರ ಮನೆ ಬಳಿ ಇರುವ ಪ್ರಾವಿಷನ್ ಸ್ಟೋರ್ ಬಳಿ ಕುಳಿತಿದ್ದೆ ಆಗ ಒಬ್ಬ ಹುಡುಗ ಓಡಿ ಬಂದಿದ್ದ ಆತನ ಹಿಂದೆ ಚಂದನ್ ಮತ್ತು ಚಂದನ್ ಇವರ ಹಿಂದೆ ಅವರ ತಂದೆ ಓಡಿ ಬಂದಿದ್ದರು. ಚಂದನ್ ಮತ್ತು ಅವರ ತಂದೆ ಹಿಡಿದಿಕೋ ಹಿಡಿದಿಕೋ ಎಂದು ಕೂಗುತ್ತಿದ್ದರು ಆಗ ನಾನು ಸಹ ಅವರ ಹಿಂದೆ ಓಡಿಹೋಗಿದ್ದೆ. ಆದರೆ ಆ ವ್ಯಕ್ತಿ ನಮ್ಮ ಕೈಗೆ ಸಿಕ್ಕಿರಲಿಲ್ಲ ರಾಮ ಮಂದಿರದ ವರೆಗೆ ಓಡಿಹೋಗಿ ಎಲ್ಲರು ನಿಂತುಕೊಂಡಿದ್ದರು. ಆಗ ಚಂದನ್ ನ್ನು ವಿಚಾರಿಸಿದಾಗ ಪಾಂಡುರವರ ಮಗ ಮನೆ ಬಳಿ ಬಂದು ಸಾಕ್ಷಿಗೆ ಸಹಿ ಹಾಕಿದ್ದಕ್ಕೆ ರಾಜೀ ಮಾಡಿಸು ಎಂದು ಹೇಳಿದ್ದ ನಿನ್ನ ತಂದೆಯ ಬಳಿ ಮಾತನಾಡುತ್ತೇನೆ ಎಂದು ಹೇಳಿ ನಾನು ಗೇಟ್ ಬಳಿ ಹೊಗುವಷ್ಟರಲ್ಲಿ ಹಲ್ಲೆ ಮಾಡಿದ್ದಾನೆ ಎಂದು ಹೇಳಿದ್ದ. ನಂತರ ಚಂದನ್ ನ್ನು ಎಲ್ಲರೂ ಸೇರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು. ಆ ದಿನ

ಓಡಿ ಹೊಗುವಾಗ ಆ ವ್ಯಕ್ತಿಯನ್ನು ನೋಡಿರಲಿಲ್ಲ ಆದರೆ ನಂತರ ಪೊಟೋದಲ್ಲಿ ನೋಡಿದ್ದೆ. ಕೋರ್ಟ್ ಮುಂದೆ ಇರುವ ಆರೋಪಿತನೇ ಆ ಪೊಟೋದಲ್ಲಿದ್ದ ವ್ಯಕ್ತಿಯಿರುತ್ತಾನೆ. ಆ ದಿನ ಓಡಿ ಹೋಗಿದ್ದ ವ್ಯಕ್ತಿ ಯಾವ ಬಟ್ಟೆ ಧರಿಸಿದ್ದ ಎಂದು ನಾನು ನೋಡಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದಾರೆ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

*2.* ದಿಃ*14.03.2023* ರಂದು ಆ ಘಟನೆ ನಡೆದಿದೆ ಎಂದರೆ ಬಹಳ ದಿನಗಳಾಗಿದ್ದರಿಂದ ಈಗ ದಿನಾಂಕ ನೆನಪಿಲ್ಲ. ಆ ದಿನ ಓಡಿ ಹೋಗಿದ್ದ ವ್ಯಕ್ತಿ ಕೈಯಲ್ಲಿ ಡ್ರ್ಯಾಗರ್ ಹಿಡಿದುಕೊಂಡು ಓಡಿ ಹೋಗುತ್ತಿದ್ದ ಎಂದರೆ ನಿಜ. ಆ ವ್ಯಕ್ತಿ ನರಸಿಂಹ ರವರ ಮನೆ ಮುಂದೆ ಓಡುತ್ತಿದ್ದಾಗ ಯಾರೋ ಅಡ್ಡ ಹಾಕಿ ಕೈ ಅಲ್ಲಿ ಡ್ರ್ಯಾಗರ್ ಇದುದ್ದನ್ನು ಕಂಡು ದೂರ ಸರಿದಿದ್ದರು ಎಂದರೆ ನಿಜ. ಆ ವ್ಯಕ್ತಿ ನರಸಿಂಹ ಇವರ ಮನೆ ಮುಂದೆ ಮುಗ್ಗರಿಸಿ ಬಿದ್ದು ಪುನಃ ಎದ್ದು ಕಾಯಿ ಅಂಗಡಿ ಕಡೆಗೆ ಓಡಿ ಹೋಗಿ ಪರಾರಿಯಾಗಿದ್ದ ಎಂದರೆ ನಿಜ. ಕೋರ್ಟ್ ಮುಂದೆ ಇರುವ ಆರೋಪಿತನೇ ಆ ದಿನ ಓಡಿ ಹೋಗಿದ್ದ ವ್ಯಕ್ತಿಯಿರುತ್ತಾನೆ ಎಂದರೆ ಆ ದಿನ ನಾನು ಆರೋಪಿತನನ್ನು ಸರಿಯಾಗಿ ಗಮನಿಸಿರಲಿಲ್ಲ ನಂತರ ಪೊಟೋದಲ್ಲಿ ನೋಡಿದ್ದರಿಂದ ಆತನೇ ಎಂದು ಗೊತ್ತಾಯಿತು. ಈಗ ನಾನು ನೋಡುತ್ತಿರುವ ಎಂ.ಓ-2 ಡ್ರ್ಯಾಗರ್ ಆ ದಿನ ಓಡಿ ಹೋಗಿದ್ದ ವ್ಯಕ್ತಿ

ಕೈ ಅಲ್ಲಿ ಇತ್ತು ಎಂದರೆ ಕತ್ತಲಾಗಿದ್ದರಿಂದ ಅದೇ ಎಂದು ಗುರುತಿಸಲು ಆಗುವುದಿಲ್ಲ. ಆರೋಪಿತನಿಗೆ ಸಹಾಯ ಮಾಡಲು ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು : ಆರೋಪಿ ಪರ ವಕೀಲರಾದ ಶ್ರೀ ಟಿ.ಹೆಚ್.ಕೆ ರವರಿಂದ:-

3. ಪೊಲೀಸರು ನನಗೆ ನೋಟಿಸ್ ಕೊಟ್ಟಿಲ್ಲ. ಆ ದಿನ ನನ್ನ ಹೇಳಿಕೆಯನ್ನು ಟೈಪ್ ಮಾಡಿಕೊಂಡಿದ್ದರು. ಆದರೆ ಅದನ್ನು ನಾನು ಓದಿಲ್ಲ. ಆ ದಿನ ನಾನು ಅಂಗಡಿ ಬಳಿ ಇದ್ದ ಬಗ್ಗೆ ಅಂಗಡಿಯವರ ಹೇಳಿಕೆ ಪಡೆದಿದ್ದಾರೋ ಇಲ್ಲವೊ ಗೊತ್ತಿಲ್ಲ. ನಾನು ಆ ದಿನ ಓಡಿ ಹೋಗಿದ್ದ ವ್ಯಕ್ತಿಯನ್ನು ನೋಡಿದ್ದೆ ಆದರೆ ಓಡಿ ಹೋದ ವ್ಯಕ್ತಿ ಯಾರು ಎಂದು ಚಂದನ್ ಹೇಳಿದ್ದರಿಂದ ಗೊತ್ತಾಗಿದೆ. ಆ ಘಟನೆಗಿಂತ ಮುಂಚೆ ನಾನು ಆರೋಪಿತನನ್ನು ನೋಡಿಲ್ಲ. ಚಂದನ್ ಮತ್ತು ನಾನು ಸ್ನೇಹಿತರು ಎಂದರೆ ನಿಜ. ಸ್ನೇಹಿತರಿರುವ ಕಾರಣ ನಾನು ಅವರ ಹೇಳಿದಂತೆ ಕೇಳುತ್ತೇನೆ ಎಂದರೆ ಸರಿಯಲ್ಲ. ಆ ದಿನ 15-20 ನಿಮಿಷ ಆ ವ್ಯಕ್ತಿಯನ್ನು ಹಿಡಿಯಲು ಹೋಗಿದ್ದೆವು. 9 ರಿಂದ 9.10 ಗಂಟೆವರೆಗೆ ಓಡಿರಬಹುದು. ಆ ದಿನ ಓಡಿ ಹೋಗಿದ್ದ ವ್ಯಕ್ತಿಯ ಬಟ್ಟೆಗಳನ್ನು ನಾನು ನೋಡಿರಲಿಲ್ಲ. ಆ ದಿನ ಆ ವ್ಯಕ್ತಿಯ ಕೈಯಲ್ಲಿದ್ದ ವಸ್ತು ಚಾಕು ಅಥವಾ ಡ್ರ್ಯಾಗರ್ ಎಂದು ನಾನು ನೋಡಿಲ್ಲ ಎಂದರೆ ನಿಜ. ಆ ದಿನ ಚಂದನ್ ಧರಿಸಿದ್ದ ಬಟ್ಟೆಯ ಬಣ್ಣ ನನಗೆ ಗೊತ್ತಿಲ್ಲ. ಚಂದನ್ ನ ಶರ್ಟ್ ನ ಹಿಂಭಾಗದಲ್ಲಿ 3 ಕಡೆ ತೂತಾಗಿತ್ತು ಮತ್ತು 3 ಕಡೆ ರಕ್ತ ಬರುತ್ತಿತ್ತು. ಆ ಕಾಲಕ್ಕೆ 10-15 ಜನ ಆಸ್ಪತ್ರೆಗೆ ಹೋಗಿದ್ದೆವು. ಆ ಎಲ್ಲರ ವಿಚಾರ ಹೇಳಿಕೆಯಲ್ಲಿ ಹೇಳಿಲ್ಲ. ಆ ದಿನ ನಾವು ನೇರವಾಗಿ ಆಸ್ಪತ್ರೆಗೆ ಹೋಗಿದ್ದೆವು. ಆಸ್ಪತ್ರೆಗೆ ಯಾವ ವಾಹನದಲ್ಲಿ ಹೋಗಿದ್ದೆವು ಮತ್ತು ಚಂದನ್ ನನ್ನು ಯಾರು ಕೂರಿಸಿಕೊಂಡಿದ್ದರು ಎಂದು ಹೇಳಿಕೆಯಲ್ಲಿ ನಮೂದು ಇಲ್ಲ. ಆ ದಿನ ಚೇತನ್ ಎಷ್ಟು ಹೊತ್ತಿಗೆ ಬಂದಿದ್ದರು ಎಂದು ಸಮಯ

ಗೊತ್ತಿಲ್ಲ. ಆ ದಿನ ನಾನು ಆರೋಪಿತನ ಮನೆ ಬಳಿ ಹೋಗಿಲ್ಲ ಬೇರೆ ಯಾರಾದರೂ ಹೋಗಿದ್ದರೋ ಇಲ್ಲವೊ ಗೊತ್ತಿಲ್ಲ. ಚಂದನ್ ಆ ಘಟನೆಗಿಂತ ಮೊದಲ ಪ್ರಕರಣದ ಬಗ್ಗೆ ಹೇಳಿದ್ದ. ಆ ದಿನ ನಾನು ಆ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆ ದಿನ ಎಷ್ಟು ಜನ ಓಡಿ ಹೋಗಿದ್ದೆವು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಆ ದಿನ ಓಡಿ ಹೊಗಿದ್ದ ಎಲ್ಲರ ಹೆಸರು ನನಗೆ ಗೊತ್ತಿಲ್ಲ ಎಂದರೆ ನಿಜ. ನನಗೆ ಈ ಘಟನೆ ಬಗ್ಗೆ ಗೊತ್ತಿಲ್ಲದಿದ್ದರು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
***ಮೈಸೂರು***